# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **686** |
| ಉತ್ತರಿಸಬೇಕಾದ ದಿನಾಂಕ | : | 21.02.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಇಲಾಖೆಯಡಿಯಲ್ಲಿ ಬರುವ ಒಟ್ಟು ನಿಗಮಗಳೆಷ್ಟು ; ಈ ನಿಗಮದಲ್ಲಿ ವರ್ಷಕ್ಕೆ ಸರಾಸರಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ; ಮನೆ ಪಡೆಯಲು ಇರುವ ಮಾನದಂಡಗಳೇನು ; | ವಸತಿ ಇಲಾಖೆಯಲ್ಲಿ ಕೆಳಕಂಡ ನಾಲ್ಕು ನಿಗಮ/ಮಂಡಳಿ/ಪ್ರಾಧಿಕಾರಗಳು ಇರುತ್ತವೆ.<br><br>1. ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ.<br>2. ಕರ್ನಾಟಕ ಗೃಹ ಮಂಡಳಿ.<br>3. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ.<br>4. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ.<br><br>**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ** :-<br><br>ರಾಜೀವ್ ಗಾಂಧಿ ವಸತಿ ನಿಗಮವನ್ನು ಸರ್ಕಾರವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವಸತಿ ಮತ್ತು ನಿವೇಶನ ರಹಿತರಿಗೆ ವಸತಿ ಹಾಗೂ ನಿವೇಶನ ಸೌಲಭ್ಯ ಕಲ್ಪಿಸಲು 2000 ನೇ ಇಸವಿಯಲ್ಲಿ ಸ್ಥಾಪಿಸಲಾಗಿರುತ್ತದೆ.<br><br>ಪ್ರತಿ ವರ್ಷ ಆಯವ್ಯಯದಲ್ಲಿ ನಿಗಧಿಪಡಿಸುವ ಅನುದಾನಕ್ಕೆ ಅನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ಗ್ರಾಮ ಪಂಚಾಯಿತಿವಾರು/ಸ್ಥಳೀಯ ಸಂಸ್ಥೆಗಳವಾರು ಮನೆಗಳ ಗುರಿ ನಿಗದಿಪಡಿಸಿ, ಗ್ರಾಮ ಸಭೆ/ ಆಶ್ರಯ ಸಮಿತಿಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಹಂತ ಹಂತವಾಗಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ. ವಸತಿ ಇಲಾಖೆಯ ವಿವಿಧ ಗ್ರಾಮೀಣ ಯೋಜನೆಗಳಡಿ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br><br>**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ** :-<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಸಮನ್ವಯಗೊಳಿಸಿ, ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ರಾಜ್ಯದ ವಿವಿಧ ನಗರ/ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಕೊಳಗೇರಿ ಪ್ರದೇಶಗಳಲ್ಲಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2015-16 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ಹಂತ ಹಂತವಾಗಿ ಒಟ್ಟು 1,80,253 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರಕಿರುತ್ತದೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿ ಯೋಜನೆಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 145 ಸಿಎಸ್‌ಎಸ್ 2015, ದಿನಾಂಕ:18.01.2016 ರಲ್ಲಿ ಹೊರಡಿಸಿರುವ ಆದೇಶದನ್ವಯ ಕೊಳಗೇರಿ ಪ್ರದೇಶಗಳಲ್ಲಿನ ಮನೆ-ಮನೆ ಬೇಡಿಕೆ ಸಮೀಕ್ಷೆ ಮಾಡಿ, ಕಚ್ಚಾ ಮತ್ತು ಸೆಮಿ ಪಕ್ಕಾ ಮನೆಗಳ ಸಮೀಕ್ಷೆ ಪಟ್ಟಿ ತಯಾರಿಸಿ, ಬೇಡಿಕೆಗೆ ಅನುಗುಣವಾಗಿ ಸರ್ಕಾರವು ಗುರಿ ನಿಗದಿಪಡಿಸಿದ್ದಲ್ಲಿ, ಯೋಜನಾ ವರದಿ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮನೆಗಳನ್ನು ನಿರ್ಮಿಸಲಾಗುತ್ತಿದೆ. |

ಆ) ವಸತಿ ಇಲಾಖೆಯಡಿಯಲ್ಲಿ ಕೊಡಗು ಜಿಲ್ಲೆಗೆ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ;

ಇ) 2018-2023 ರವರೆಗೆ ಕೊಡಗು ಜಿಲ್ಲೆಗೆ ಹಂಚಿಕೆಯಾದ ಒಟ್ಟು ಮನೆಗಳು ಎಷ್ಟು ಮತ್ತು ಹೊಸತಾಗಿ ನಿರ್ಮಾಣವಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

2019-20 ರಿಂದ 2021-22 ರವರೆಗೆ ವಿವಿಧ ವಸತಿ ಯೋಜನೆಯಡಿ 3581 ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಪ್ರಗತಿ ವಿವರ ಈ ಕೆಳಗಿನಂತಿದೆ.

| ಯೋಜನೆ | ಮಂಜೂರು | ಪೂರ್ಣ | ಪ್ರಗತಿಯಲ್ಲಿರುವ ಮನೆ ಗಳು | ಪ್ರಾರಂಭವಾಗದ ಮನೆ ಗಳು | ತಾತ್ಕಾಲಿಕವಾಗಿ ಬ್ಲಾಕ್ ಆಗಿರುವ ಮನೆಗಳು |
|---|---|---|---|---|---|
| ಬಸವ ವಸತಿ | 2289 | 1074 | 760 | 443 | 12 |
| ದೇವರಾಜು ಅರಸು ವಸತಿ -ಗ್ರಾ | 5 | 2 | 0 | 3 | 0 |
| ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ -ಗ್ರಾ | 1040 | 395 | 346 | 292 | 7 |
| ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ -ನ | 59 | 8 | 19 | 32 | 0 |
| ಪ್ರಧಾನ ಮಂತ್ರಿ ಅವಾಸ್ -ಗ್ರಾ | 2 | 1 | 1 | 0 | 0 |
| ವಾಜಪೇಯಿ ನಗರ ವಸತಿ | 186 | 25 | 60 | 101 | 0 |
| **ಒಟ್ಟು** | **3581** | **1505** | **1186** | **871** | **19** |

2022-23 ಮತ್ತು 2023-24 ನೇ ಸಾಲಿಗೆ ಕೊಡಗು ಜಿಲ್ಲೆಗೆ ಸರ್ಕಾರದಿಂದ ಹೊಸ ಮನೆಗಳ ಗುರಿ ಹಂಚಿಕೆ ಮಾಡಿರುವುದಿಲ್ಲ.

ತಾಲ್ಲೂಕವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ :ವಇ 41 ಆರ್ಐ 2024

**(ಬಿ.ಝಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು

| District | Taluk | Scheme | Series | Approved | Completed | Foundation | Lintel | Roof | Progress Total | Unstarted | Blocked |
|---|---|---|---|---|---|---|---|---|---|---|---|
| Kodagu | Kushalanagar | Basava Housing Scheme | 2021-2022 | 365 | 177 | 57 | 43 | 13 | 113 | 70 | 5 |
| Kodagu | Kushalanagar | Devraj Urs Housing Scheme-Rural | 2020-2021 | 1 | 1 | 0 | 0 | 0 | 0 | 0 | 0 |
| Kodagu | Kushalanagar | Dr.B.R Ambedkar Nivas Yojana Rural | 2021-2022 | 168 | 59 | 21 | 36 | 3 | 60 | 46 | 3 |
| | **Kushalanagar Total** | | | **534** | **237** | **78** | **79** | **16** | **173** | **116** | **8** |
| Kodagu | Kushalanagar TP | Dr.B.R Ambedkar Nivas Yojana Urban | 2021-2022 | 12 | 2 | 3 | 1 | 3 | 7 | 3 | 0 |
| Kodagu | Kushalanagar TP | Vajpayee Urban Housing Scheme | 2021-2022 | 55 | 8 | 7 | 7 | 6 | 20 | 27 | 0 |
| | **Kushalanagar TP Total** | | | **67** | **10** | **10** | **8** | **9** | **27** | **30** | **0** |
| Kodagu | Madikeri | Basava Housing Scheme | 2021-2022 | 633 | 317 | 91 | 78 | 61 | 230 | 85 | 1 |
| Kodagu | Madikeri | Dr.B.R Ambedkar Nivas Yojana Rural | 2021-2022 | 177 | 83 | 23 | 25 | 13 | 61 | 31 | 2 |
| Kodagu | Madikeri | PMAY(G) | 2019-2020 | 1 | 0 | 1 | 0 | 0 | 1 | 0 | 0 |
| | **Madikeri Total** | | | **811** | **400** | **115** | **103** | **74** | **292** | **116** | **3** |
| Kodagu | Madikeri CMC | Dr.B.R Ambedkar Nivas Yojana Urban | 2021-2022 | 23 | 5 | 1 | 0 | 3 | 4 | 14 | 0 |
| Kodagu | Madikeri CMC | Vajpayee Urban Housing Scheme | 2021-2022 | 51 | 6 | 7 | 5 | 2 | 14 | 31 | 0 |
| | **Madikeri CMC Total** | | | **74** | **11** | **8** | **5** | **5** | **18** | **45** | **0** |
| Kodagu | Ponnampet | Basava Housing Scheme | 2021-2022 | 384 | 186 | 46 | 27 | 22 | 95 | 101 | 2 |
| Kodagu | Ponnampet | Dr.B.R Ambedkar Nivas Yojana Rural | 2021-2022 | 288 | 80 | 46 | 23 | 23 | 92 | 115 | 1 |
| Kodagu | Ponnampet | PMAY(G) | 2019-2020 | 1 | 1 | 0 | 0 | 0 | 0 | 0 | 0 |
| | **Ponnampet Total** | | | **673** | **267** | **92** | **50** | **45** | **187** | **216** | **3** |
| Kodagu | Somwarpet | Basava Housing Scheme | 2021-2022 | 577 | 288 | 108 | 48 | 22 | 178 | 107 | 4 |
| Kodagu | Somwarpet | Devraj Urs Housing Scheme-Rural | 2020-2021 | 4 | 1 | 0 | 0 | 0 | 0 | 3 | 0 |
| Kodagu | Somwarpet | Dr.B.R Ambedkar Nivas Yojana Rural | 2021-2022 | 190 | 96 | 29 | 23 | 6 | 58 | 36 | 0 |
| | **Somwarpet Total** | | | **771** | **385** | **137** | **71** | **28** | **236** | **146** | **4** |
| Kodagu | Somwarpet TP | Dr.B.R Ambedkar Nivas Yojana Urban | 2021-2022 | 12 | 1 | 4 | 0 | 1 | 5 | 6 | 0 |
| Kodagu | Somwarpet TP | Vajpayee Urban Housing Scheme | 2021-2022 | 43 | 10 | 8 | 2 | 4 | 14 | 19 | 0 |
| | **Somwarpet TP Total** | | | **55** | **11** | **12** | **2** | **5** | **19** | **25** | **0** |

LCQ-686

ಅನುಬಂಧ-1

| District | Taluk | Scheme | Series | Approved | Completed | Foundation | Lintel | Roof | Progress Total | Unstarted | Blocked |
|---|---|---|---|---|---|---|---|---|---|---|---|
| Kodagu | Virajpet | Basava Housing Scheme | 2021-2022 | 330 | 106 | 67 | 43 | 34 | 144 | 80 | 0 |
| Kodagu | Virajpet | Dr.B.R Ambedkar Nivas Yojana Rural | 2021-2022 | 217 | 77 | 43 | 24 | 8 | 75 | 64 | 1 |
| | **Virajpet Total** | | | **547** | **183** | **110** | **67** | **42** | **219** | **144** | **1** |
| Kodagu | Virajpet TP | Dr.B.R Ambedkar Nivas Yojana Urban | 2021-2022 | 12 | 0 | 1 | 1 | 1 | 3 | 9 | 0 |
| Kodagu | Virajpet TP | Vajpayee Urban Housing Scheme | 2021-2022 | 37 | 1 | 5 | 5 | 2 | 12 | 24 | 0 |
| | **Virajpet TP Total** | | | **49** | **1** | **6** | **6** | **3** | **15** | **33** | **0** |
| | **Grand Total** | | | **3581** | **1505** | **568** | **391** | **227** | **1186** | **871** | **19** |

ಅನುಬಂಧ -2

ವಸತಿ ಇಲಾಖೆಯ ವಿವಿಧ ಗ್ರಾಮೀಣ ಯೋಜನೆಗಳಡಿ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳ ವಿವರ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.
- ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ.1,20,000/- ಹಾಗೂ ನಗರ ಪ್ರದೇಶದಲ್ಲಿ ರೂ.2,00,000/-ಕ್ಕಿಂತ ಕಡಿಮೆ ಇರಬೇಕು.
- ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)
- ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.
- ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದ Awaas Plus PWL ಪಟ್ಟಿಯಲ್ಲಿ ಹೆಸರು ಸೇರಿರಬೇಕು.
- ಡಾ|| ಬಿ.ಆರ್.ಅಂಬೇಡ್ಕರ್ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಕ್ಕೆ ಸೇರಿದವರಾಗಿರಬೇಕು.

**ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಯಡಿ ಫಲಾನುಭವಿಗಳನ್ನು ಗುರುತಿಸಲು/ ಆಯ್ಕೆ ಮಾಡುವ ಮಾನದಂಡ ಈ ಕೆಳಗಿನಂತಿವೆ.**

- ಫಲಾನುಭವಿಯು ಬೇಡಿಕೆ ಸಮೀಕ್ಷೆಯಲ್ಲಿರಬೇಕು.
- ದೇಶದಾದ್ಯಂತ ಅವನ/ಅವಳ ಹೆಸರಿನಲ್ಲಿ ಯಾವುದೇ ಮನೆ ಇರಬಾರದು.
- ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಕಡಿಮೆ ಇರಬೇಕು.
- ಇತರೇ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.
- ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು.